ಅಸಲು ದಾವೆ ಸಂಖ್ಯೆ - 312/2018
ಡಿ.ಡಬ್ಲ್ಯೂ - 02
ದಿನಾಂಕಃ 31-10-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ</u>

ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರು ಮಾಡಲು ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ಆದರಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಗೊತ್ತು ಎಂದು ನುಡಿಯುತ್ತಾರೆ. ವಾದಿಯು ಎಲ್ಲಿ ಹುಟ್ಟಿರುತ್ತಾರೆ ಎಂದರೆ ಬಂಕಾಪುರದಲ್ಲಿ ಹುಟ್ಟಿರುತ್ತಾರೆ. ಶಾಲೆಯನ್ನು ಎಲ್ಲಿ ಕಲಿತಿರುತ್ತಾರೆ ಎಂದರೆ ತವರಮೆಳ್ಳಿಹಳ್ಳಿಯಲ್ಲಿ ಎಂದು ನುಡಿಯುತ್ತಾರೆ. ಈ ಮೊದಲು ದಾವಾ ಜಮೀನನ್ನು ವಾದಿ, ವಾದಿಯ ಗಂಡ ಮತ್ತು ಮಗ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಪ್ರತಿವಾದಿ ಮಾಡುತ್ತಿದ್ದಾನೆ. ಪ್ರತಿವಾದಿ ಪೋಲಿಸ ಇರುತ್ತಾನೆ ಎಂದರೆ ಸರಿ. ವಾದಿಯು ಹುಟ್ಟಿದಾಗ ನಿಮಗೆ ಎಷ್ಟು ವರ್ಷ ಆಗಿತ್ತು ಎಂದರೆ 10-12 ಆಗಿತ್ತು. ನೀವು 10 ವರ್ಷ ಇದ್ದಾಗ ವಾದಿಯು ಚನ್ನಬಸಪ್ಪನಿಗೆ ಹುಟ್ಟಿದ್ದಳೋ ಅಥವಾ ಬಸಪ್ಪನಿಗೆ ಹುಟ್ಟಿದಳೋ ಎಂದು ಹೇಳಲು ಆಗುವುದಿಲ್ಲ ಎಂದರೆ ಆಗ ಚನ್ನಬಸಪ್ಪನಿಗೆ ಮಕ್ಕಳು ಇರಲಿಲ್ಲ ಆಗ ವಾದಿಯನ್ನು ಕರೆದುಕೊಂಡು ಬಂದು ಅವರು ಸಾಕಿರುತ್ತಾರೆ.

ಗಂಗವ್ವ ರವರು ಬಳಹ ದಿನಗಳಿಂದ ಹುಷಾರು ಇರಲಿಲ್ಲ ಎಂದರೆ ಸರಿಯಲ್ಲ. ಗಂಗವ್ವರವರಿಗೆ ಮಕ್ಕಳು ಆಗಿರಲಿಲ್ಲ ಮತ್ತು ಆರೋಗ್ಯ ಸರಿ ಇಲ್ಲದ ಕಾರಣ ನಾಗವ್ವಳನ್ನು ಕರೆದುಕೊಂಡು ಬಂದರು ಎಂದರೆ ಆ ವೇಳೆಯಲ್ಲಿ ಅವರು ಚನ್ನಬಸಪ್ಪರವರ ಮನೆಯಲ್ಲಿ ಇದ್ದಳು. ಮುಂದುವರೆದು ಅದೇ ಮನೆಯಲ್ಲಿ ನಾಗವ್ವ ಮತ್ತು ಚೆನ್ನಪ್ಪ ಬೇರೆ ಇದ್ದರು. ಚೆನ್ನಪ್ಪನ ಊರು ಯಾವುದು ಎಂದರೆ ಹಳೆ ಬಂಕಾಪುರ. ಪ್ರತಿವಾದಿಯ ಊರು ಯಾವುದು ಎಂದರೆ ಹಳೆ ಬಂದಕಾಪುರ. ಸರೋಜಿನಿ(ಪ್ರತಿವಾದಿಯ ಸಹೋದರ) ಎಲ್ಲಿ ಹುಟ್ಟಿರುತ್ತಾರೆ ಎಂದರೆ ಹಳೆ ಬಂಕಾಪುರದಲ್ಲಿ ಹುಟ್ಟಿರುತ್ತಾರೆ. ನಾಗವ್ವಳ ಶಾಲಾದಾಖಲಾತಿ ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಶಾಲಾದಾಖಲಾತಿ ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಪ್ಯಾರಾ ನಂ. 6 ರಲ್ಲಿ "ವಾದಿಯು ಇತ್ತಿತ್ತಲಾಗಿ ------ ಅಂತಾ ತಿಳಿದು ಬಂದಿರುತ್ತದೆ". ಈ ಮೇಲೆ ಹೇಳಿದ ನೀವೆನಾದರೂ

ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚೆನ್ನಪ್ಪ ಮತ್ತು ಚೆನ್ನಬಸಪ್ಪ ಒಂದೇ ಮನೆಯಲ್ಲಿ ಎಷ್ಟು ದಿನ ಇರುತ್ತೀದ್ದರು ಎಂದರೆ ಚೆನ್ನಪ್ಪ 8 ದಿನ ಕೆಲಸಕ್ಕೆ ಹೋಗುತ್ತಿದ್ದನು. ಮತ್ತು 8 ದಿನ ಮನೆಯಲ್ಲಿ ಇರುತ್ತಿದ್ದನು. ಈ ರೀತಿ ಎಷ್ಟು ವರ್ಷ ಇದ್ದನು ಎಂದರೆ ಸುಮಾರು 10 ವರ್ಷದ ವರೆಗೆ ಇದ್ದನು. ಎಷ್ಟನೇ ವರ್ಷದಿಂದ ಎಷ್ಟನೇ ವರ್ಷದ ತನಕ ಇದ್ದನು ಎಂದರೆ ನನಗೆ ಹೇಳಲು ಆಗುವುದಿಲ್ಲ. ಚನ್ನಬಸಪ್ಪನೇ ವಾದಿಗೆ ಶಾಲೆಗೆ ಸೇರಿಸಿರುತ್ತಾನೆ ಎಂದರೆ ಆಗ ಚನ್ನಬಸಪ್ಪನಿಗೆ ಮಕ್ಕಳು ಇಲ್ಲದೆ ಇದ್ದ ಕಾರಣ ಅವನೇ ಶಾಲೆಗೆ ಸೇರಿಸಬಹುದು ಎಂದು ನುಡಿಯುತ್ತಾರೆ.

ವಾದಿಯು ಎಷ್ಟು ವರ್ಷದವಳಾಗಿದ್ದಾಗ ತವರಮೆಳ್ಳಿಹಳ್ಳಿಗೆ ಬಂದಿರುತ್ತಾರೆ ಎಂದರೆ 2 ವರ್ಷದವಳಾಗಿದ್ದಾಗ ಕರೆದುಕೊಂಡು ಬಂದಿರುತ್ತಾರೆ. ಪ್ರತಿವಾದಿಯು ದತ್ತಕವಾದ ಬಗ್ಗೆ ನಿಮಗೇನಾದರೂ ವೈಯಕ್ತಿಕವಾಗಿ ಮಾಹಿತಿ ಇದೆಯಾ ಎಂದರೆ ವೈಯಕ್ತಿಕವಾಗಿ ಇರುವುದಿಲ್ಲ ಆದರೆ ಸಾಮಾನ್ಯವಾಗಿ ಮನೆಯಲ್ಲಿ ದತ್ತಕ ಮಾಡಿಕೊಂಡಿರುತ್ತಾರೆ. ನಂತರ ಕಚೇರಿಯಲ್ಲಿ ನೊಂದಣಿ ಮಾಡಿರುತ್ತಾರೆ. ನಿವೇನಾದರೂ ಸದರಿ ನೊಂದಣಿ ಕಾಗದಕ್ಕೆ ಸಹಿಯನ್ನು ಮಾಡಿದ್ದೀರಾ ಎಂದರೆ ಆಗ ನಾನು ಸಣ್ಣವನಿದ್ದೇನು ಸುಮಾರು 18-19 ವರ್ಷ ಆಗಿತ್ತು. ಸಹಿಯನ್ನು ಮಾಡಿರುವುದಿಲ್ಲ. ನಮ್ಮ ತಂದೆ ಮಾಡಿರುತ್ತಾರೆ.

ವಾದಿಯು ಚನ್ನಬಸಪ್ಪನ ಮಗಳು ಆಗಿದ್ದರು ಸಹ ಪ್ರತಿವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸುಮಾರು ವರ್ಷಗಳಿಂದ ವಾದಿಯೇ ದಾವಾ ಆಸ್ತಿಯನ್ನು ವಹಿವಾಟು ಮಾಡುತ್ತಿದ್ದರು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಪ್ರತಿವಾದಿಯೇ ವಹಿವಾಟು ಮಾಡುತ್ತಿದ್ದಾರೆ.

ಪ್ರತಿವಾದಿಯು ನಿಮಗೆ ಏನಾಗಬೇಕು ಎಂದರೆ ನಾವು ಪ್ರತಿವಾದಿ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಆಗಿರುತ್ತೇವೆ. ಆದ ಕಾರಣ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.